# ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩೨೭೬

## ಅಕ್ಟೋಬರ್ ೦೪, ೨೦೧೯ರಂದು ನಡೆದ ೨೦೧ನೇ ಕಾರ್ಯಕಾರಿ ಸಮಿತಿ ಸಭೆಯ ಪರಿಷ್ಕೃತ ನಡೆವಳಿಗಳು

### ಸಭೆಯಲ್ಲಿ ಉಪಸ್ಥಿತರಿದ್ದವರು

| | |
|---|---|
| ೦೧. ಡಾ. ಸ.ಚಿ. ರಮೇಶ, ಮಾನ್ಯ ಕುಲಪತಿಯವರು, ಕವಿಹಂ. | : ಅಧ್ಯಕ್ಷರು |
| ೦೨. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆ | : ಸದಸ್ಯರು |
| ೦೩. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ | : ಸದಸ್ಯರು |
| ೦೪. ಡಾ. ವೀರೇಶ್ ಬಡಿಗೇರ, ಡೀನ್, ಭಾಷಾ ನಿಕಾಯ, ಕವಿಹಂ | : ಸದಸ್ಯರು |
| ೦೫. ಡಾ. ಕೇಶವನ್ ಪ್ರಸಾದ್, ಡೀನ್, ಸಮಾಜ ವಿಜ್ಞಾನಗಳ ನಿಕಾಯ | : ಸದಸ್ಯರು |
| ೦೬. ಡಾ. ಕೆ. ರವೀಂದ್ರನಾಥ, ಡೀನ್, ಲಲಿತ ಕಲೆಗಳ ನಿಕಾಯ, ಕವಿಹಂ | : ಸದಸ್ಯರು |
| ೦೭. ಡಾ. ಸಿ.ಮಹದೇವ, ಡೀನ್, ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |
| ೦೮. ಡಾ. ರಮೇಶ ನಾಯಕ, ಹಣಕಾಸು ಅಧಿಕಾರಿಗಳು | : ವಿಶೇಷ ಆಹ್ವಾನಿತರು |
| ೦೯. ಡಾ. ಎ. ಸುಬ್ಬಣ್ಣ ರೈ, ಕುಲಸಚಿವರು | : ಪದನಿಮಿತ್ತ ಕಾರ್ಯದರ್ಶಿ |

### ಸಭೆಯಲ್ಲಿ ಅನುಪಸ್ಥಿತರಿದ್ದವರು

| | |
|---|---|
| ೦೧. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ | : ಸದಸ್ಯರು |
| ೦೨. ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ | : ಸದಸ್ಯರು |
| ೦೩. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | : ಸದಸ್ಯರು |

ಸಭೆಯ ಆರಂಭದಲ್ಲಿ ಕುಲಸಚಿವರು ಕಾರ್ಯಕಾರಿ ಸಮಿತಿ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು. ನಂತರ ಮಂಡಿಸಲಾದ ಕಾರ್ಯಸೂಚಿಯ ಕುರಿತು ಸಭೆಯಲ್ಲಿ ಚರ್ಚಿಸಿ ಈ ಕೆಳಕಂಡಂತೆ ನಿರ್ಣಯಗಳನ್ನು ಕೈಗೊಳ್ಳಲಾಯಿತು.

**೨೦೦ನೇ ಸಭೆ ನಡೆವಳಿ ಸ್ಥಿರೀಕರಣ**

ದಿನಾಂಕ ೦೬.೦೬.೨೦೧೯ರಂದು ನಡೆದ ಕಾರ್ಯಕಾರಿ ಸಮಿತಿಯ ೨೦೦ನೇ ಸಭೆಯ ನಡೆವಳಿಗಳ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು (ಅನುಬಂಧ-೦೧).

ದಿ. ೦೬.೦೬.೨೦೧೯ರಂದು ನಡೆದ ಕಾರ್ಯಕಾರಿ ಸಮಿತಿಯ ೨೦೦ನೇ ಸಭೆಯ ನಡೆವಳಿಗಳನ್ನು ಪರಿಶೀಲಿಸಿ ಸ್ಥಿರೀಕರಣಕ್ಕೆ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**೨೦೦ನೇ ಸಭೆ ನಡೆವಳಿ ಅನುಪಾಲನೆ**

ದಿ. ೦೬.೦೬.೨೦೧೯ರಂದು ನಡೆದ ಕಾರ್ಯಕಾರಿ ಸಮಿತಿಯ ೨೦೦ನೇ ಸಭೆಯ ನಡೆವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡುವ ಕುರಿತು (ಅನುಬಂಧ-೦೨).

(೧) ೨೦೦ನೇ ಸಭೆಯ ನಡೆಗಳಿಗಳ ಸ್ಥಿರೀಕರಣದ ಚರ್ಚೆಯಲ್ಲಿ ಸರ್ಕಾರದ ಹಣಕಾಸು ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ಪರವಾಗಿ ಉಪಸ್ಥಿತರಿದ್ದ ಜಂಟಿಕಾರ್ಯದರ್ಶಿಯವರು, ಶ್ರೀ ಸೋಮನಾಥ. ಎಚ್.ಎಂ.ರವರ ಅಮಾನತ್ತು ಹಿಂಪಡೆದ ೨೦೦.೦೬ರ ವಿಷಯವನ್ನು ಪ್ರಸ್ತಾಪಿಸಿದರು.

(೨) ಶ್ರೀ ಸೋಮನಾಥ.ಎಚ್.ಎಂ, ಅಧೀಕ್ಷಕರವರ ಅಮಾನತ್ತು ಪ್ರಕರಣದಲ್ಲಿ ಇತ್ಯರ್ಥವಾಗದ ಆರೋಪದ ಕುರಿತು ಕೇಳಲಾದ ವಿವರಗಳಿಗೆ ಸಭೆಗೆ ಕೆಳಕಂಡ ವಿಷಯಗಳನ್ನು ಮನವರಿಕೆ ಮಾಡಿಕೊಡಲಾಯಿತು.

(೧) ಕರ್ನಾಟಕ ವಿಧಾನ ಪರಿಷತ್ತು ಸದಸ್ಯರುಗಳಾದ ಮಾನ್ಯ ಶ್ರೀ ಬಸವರಾಜ ಹೊರಟ್ಟಿರವರ ನಿಯಮ ೩೩೦ರಡಿಯ ಸೂಚನಾ ಪತ್ರಕ್ಕೆ ಮತ್ತು ಮಾನ್ಯ ಶ್ರೀ ಎಸ್.ಆರ್.ಪಾಟೀಲ್ ಅವರ ಚುಕ್ಕೆಗುರುತಿಲ್ಲದ ಪ್ರಶ್ನೆಗೆ ಪರಿಷತ್ತಿನ ಕಲಾಪಗಳಲ್ಲಿ ಸರಕಾರ ಉತ್ತರಿಸಲು ಶ್ರೀ ಸೋಮನಾಥ.ಎಚ್.ಎಂ, ಅಧೀಕ್ಷಕರವರ ಅಮಾನತ್ತು ಹಿಂಪಡೆದ ಪ್ರಕರಣದ ಸಂಪೂರ್ಣ ದಾಖಲೆಗಳನ್ನು ಖುದ್ದು ಹಾಜರುಪಡಿಸಲು ಉನ್ನತ ಶಿಕ್ಷಣ ಇಲಾಖೆಯು ವಿಶ್ವವಿದ್ಯಾಲಯವನ್ನು ಕೋರಿದ್ದ ಮೇರೆಗೆ, ವಿಶ್ವವಿದ್ಯಾಲಯವು ಒದಗಿಸಿದ್ದ ದಾಖಲೆಗಳನ್ನು ಉನ್ನತ ಶಿಕ್ಷಣ ಇಲಾಖೆಯ ಉಪಕಾರ್ಯದರ್ಶಿಯವರು, ಅಧೀನ ಕಾರ್ಯದರ್ಶಿಯವರು ಮತ್ತು ಶಾಖಾಧಿಕಾರಿಗಳು ಪರಿಶೀಲಿಸಿ, ಶ್ರೀ ಸೋಮನಾಥ.ಎಚ್.ಎಂ, ಅಧೀಕ್ಷಕರವರ ಅಮಾನತ್ತು ಹಿಂಪಡೆದು ಆರೋಪ ಮುಕ್ತಗೊಳಿಸಿದ ವಿಶ್ವವಿದ್ಯಾಲಯದ ಕಾರ್ಯಕಾರಿ ಸಮಿತಿಯ ಹಿಂದಿನ ಸಭೆ ನಿರ್ಣಯವು ಸಿ.ಸಿ.ಎ. ನಿಯಮಾವಳಿಗಳಿಗೆ ಅನುಗುಣವಾಗಿದೆ ಎಂದು ಸರ್ಕಾರವು ವಿಧಾನ ಪರಿಷತ್ತಿಗೆ ಉತ್ತರಿಸಿದೆ.

(೨) ಶ್ರೀ ಸೋಮನಾಥ.ಎಚ್.ಎಂ, ಅಧೀಕ್ಷಕರವರ ವಿರುದ್ಧ ಆರೋಪದ ಖಾಸಗಿ ದೂರಿನ ತನಿಖೆಗೆ ಕರ್ನಾಟಕ ಮಾನ್ಯ ಉಚ್ಚನ್ಯಾಯಾಲಯ, ಧಾರವಾಡ ಪೀಠದ ತಡೆಯಾಜ್ಞೆ ನೀಡಿದ್ದರಿಂದ, ಪ್ರಕರಣದ ತನಿಖೆಯನ್ನು ಕೈಗೊಂಡಿಲ್ಲವೆಂದು ಕಮಲಾಪುರ ಪೊಲೀಸ್ ಠಾಣೆಯು ಹಿಂಬರಹ ನೀಡಿದೆ. ಶ್ರೀಯುತರ ವಿರುದ್ಧ ವಿಚಾರಣೆಗೆ ಪ್ರಸ್ತುತ ವಿಶ್ವವಿದ್ಯಾಲಯದ ಮುಂದೆ ಯಾವುದೇ ಪ್ರಕರಣ ಬಾಕಿ ಇರುವುದಿಲ್ಲ.

ನಂತರ ೨೦೦ನೇ ಸಭೆಯ ನಡೆವಳಿಗಳ ಅನುಪಾಲನಾ ವರದಿಗೆ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

೨೦೧.೦೧ ಡಾ. ಎಂ.ಉಷಾ, ಪ್ರಾಧ್ಯಾಪಕರು, ಭಾಷಾಂತರ ಅಧ್ಯಯನ ವಿಭಾಗ ಇವರ ಸ್ವಯಂ ನಿವೃತ್ತಿ ಅರ್ಜಿಯ ಕುರಿತು.

ನಿರ್ಣಯ : ಡಾ. ಎಂ. ಉಷಾ, ಪ್ರಾಧ್ಯಾಪಕರು, ಭಾಷಾಂತರ ಅಧ್ಯಯನ ವಿಭಾಗ ಇವರು ಕುಲಸಚಿವರ ಸಮಕ್ಷಮ ನೀಡಿರುವ ಸ್ವಯಂ ಹೇಳಿಕೆಯನ್ನು ಅವಲೋಕಿಸಿದ ಸಭೆಯು, ನ್ಯಾಕ್ ಪೀರ್ ಟೀಂ ವಿಶ್ವವಿದ್ಯಾಲಯಕ್ಕೆ ಬಂದುಹೋದ ತರುವಾಯ ಸ್ವಯಂ ನಿವೃತ್ತಿ ಅರ್ಜಿಯ ಕುರಿತ ಅಂತಿಮ ನಿರ್ಣಯವನ್ನು ಮಾನ್ಯ ಕುಲಪತಿಯವರು ಕೈಗೊಳ್ಳಬಹುದೆಂದು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

೨೦೧.೦೨ ಡಾ. ಶಿವಾನಂದ.ಎಸ್.ವಿರಕ್ತಮಠ, ಪ್ರಾಧ್ಯಾಪಕರು, ಮಹಿಳಾ ಅಧ್ಯಯನ ವಿಭಾಗ, ಇವರ ಸಬಾಟಿಕಲ್ ರಜೆ ಅರ್ಜಿ ಕುರಿತು.

ನಿರ್ಣಯ : ಡಾ. ಶಿವಾನಂದ.ಎಸ್.ವಿರಕ್ತಮಠ, ಪ್ರಾಧ್ಯಾಪಕರು, ಮಹಿಳಾ ಅಧ್ಯಯನ ವಿಭಾಗ, ಇವರಿಗೆ ಸಬಾಟಿಕಲ್ ರಜೆ ಮಂಜೂರು ಮಾಡುವ ಕುರಿತು, ನ್ಯಾಕ್ ಪೀರ್ ಟೀಂ ವಿಶ್ವವಿದ್ಯಾಲಯಕ್ಕೆ ಬಂದುಹೋದ ತರುವಾಯ ಅಂತಿಮ ನಿರ್ಣಯವನ್ನು ಮಾನ್ಯ ಕುಲಪತಿಯವರು ಕೈಗೊಳ್ಳಬಹುದೆಂದು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

೨೦೧.೦೩ ೨೦೧೮-೧೯ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ನೀಡುವ ಕುರಿತು

ನಿರ್ಣಯ : ೨೦೧೮-೧೯ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಚರ್ಚೆಯ ನಂತರ ಕಾರ್ಯಕಾರಿ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

೨೦೧.೦೪ ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯು ಬಿಡುಗಡೆ ಮಾಡಿದ ೨೦೧೭-೧೮ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ಹಾಗೂ ಅನುಪಾಲನಾ ವರದಿಯ ಕುರಿತು.

ನಿರ್ಣಯ : ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯು ಬಿಡುಗಡೆ ಮಾಡಿದ ೨೦೧೭-೧೮ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ಹಾಗೂ ಅನುಪಾಲನಾ ವರದಿಯನ್ನು ಚರ್ಚೆಯ ನಂತರ ಕಾರ್ಯಕಾರಿ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

೨೦೧.೦೫ ದಿ.೨೭.೦೬.೨೦೧೯ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಚಿತ್ರಕಲಾ ವಿದ್ಯಾಲಯಗಳ ಪ್ರಾಚಾರ್ಯರ ಸಭೆಯ ನಡೆವಳಿಗಳಿಗೆ ಅನುಮೋದನೆ ನೀಡುವ ಕುರಿತು.

ನಿರ್ಣಯ : ದಿ.೨೭.೦೬.೨೦೧೯ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಚಿತ್ರಕಲಾ ವಿದ್ಯಾಲಯಗಳ ಪ್ರಾಚಾರ್ಯರ ಸಭೆಯ ನಡೆವಳಿಗಳಿಗೆ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

5-11-19

೨೦೧.೦೬ ದಿ.೦೯.೦೭.೨೦೧೯ರಂದು ನಡೆದ ಬಿ.ವಿ.ಎ. ಪದವಿ ತರಗತಿಯ ಅಧ್ಯಯನ ಮಂಡಳಿ ಸಭೆಯ ನಡೆವಳಿಗಳಿಗೆ ಅನುಮೋದನೆ ನೀಡುವ ಕುರಿತು.

ನಿರ್ಣಯ : ದಿ.೦೯.೦೭.೨೦೧೯ರಂದು ನಡೆದ ಬಿ.ವಿ.ಎ. ಪದವಿ ತರಗತಿಯ ಅಧ್ಯಯನ ಮಂಡಳಿ ಸಭೆಯ ನಡೆವಳಿಗಳಿಗೆ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

೨೦೧.೦೭ ದಿ.೦೯.೦೭.೨೦೧೯ರಂದು ನಡೆದ ಬಿ.ವಿ.ಎ. ಪಠ್ಯಕ್ರಮ ರಚನಾ ಸಮಿತಿ ಸಭೆಯ ನಡೆವಳಿಗಳಿಗೆ ಅನುಮೋದನೆ ನೀಡುವ ಕುರಿತು.

ನಿರ್ಣಯ : ದಿ.೦೯.೦೭.೨೦೧೯ರಂದು ನಡೆದ ಬಿ.ವಿ.ಎ. ಪಠ್ಯಕ್ರಮ ರಚನಾ ಸಮಿತಿ ಸಭೆಯ ನಡೆವಳಿಗಳಿಗೆ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

೨೦೧.೦೮ ದಿ.೧೭.೦೬.೨೦೧೯ರಂದು ನಡೆದ ಡೀನ್ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಸಭೆ ಅನುಮೋದನೆ ನೀಡುವ ಕುರಿತು.

ನಿರ್ಣಯ : ದಿ.೧೭.೦೬.೨೦೧೯ರಂದು ನಡೆದ ಡೀನ್ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

೨೦೧.೦೯ ದಿ.೦೩.೦೭.೨೦೧೯ರಂದು ನಡೆದ ಡೀನ್ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಸಭೆ ಅನುಮೋದನೆ ನೀಡುವ ಕುರಿತು.

ನಿರ್ಣಯ : ದಿ.೦೩.೦೭.೨೦೧೯ರಂದು ನಡೆದ ಡೀನ್ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

೨೦೧.೧೦ ದಿ.೧೧.೦೭.೨೦೧೯ರಂದು ನಡೆದ ಡೀನ್ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಸಭೆ ಅನುಮೋದನೆ ನೀಡುವ ಕುರಿತು.

ನಿರ್ಣಯ : ದಿ.೧೧.೦೭.೨೦೧೯ರಂದು ನಡೆದ ಡೀನ್ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

೨೦೧.೧೧ ದಿ.೦೨.೦೮.೨೦೧೯ರಂದು ನಡೆದ ಡೀನ್ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಸಭೆ ಅನುಮೋದನೆ ನೀಡುವ ಕುರಿತು

ನಿರ್ಣಯ : ದಿ.೦೨.೦೮.೨೦೧೯ರಂದು ನಡೆದ ಡೀನ್ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

೨೦೧.೧೨ ದಿ.೨೨.೦೮.೨೦೧೯ರಂದು ನಡೆದ ಡೀನ್ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಸಭೆ ಅನುಮೋದನೆ ನೀಡುವ ಕುರಿತು

ನಿರ್ಣಯ : ದಿ.೨೨.೦೮.೨೦೧೯ರಂದು ನಡೆದ ಡೀನ್ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

೨೦೧.೧೩ ದಿ.೨೩.೦೯.೨೦೧೯ರಂದು ನಡೆದ ಡೀನ್ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಸಭೆ ಅನುಮೋದನೆ ನೀಡುವ ಕುರಿತು.

ನಿರ್ಣಯ : ದಿ.೨೩.೦೯.೨೦೧೯ರಂದು ನಡೆದ ಡೀನ್ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

೨೦೧.೧೪ ವಸ್ತುಸಂಗ್ರಹಾಲಯ ಮತ್ತು ಪ್ರವಾಸೋದ್ಯಮ ಸಂಶೋಧನ ಕೇಂದ್ರದ ಪರಿನಿಯಮಗಳಿಗೆ ಕಾರ್ಯಕಾರಿ ಸಮಿತಿ ಸಭೆ ಅನುಮೋದನೆ ನೀಡುವ ಕುರಿತು.

ನಿರ್ಣಯ : ವಸ್ತುಸಂಗ್ರಹಾಲಯ ಮತ್ತು ಪ್ರವಾಸೋದ್ಯಮ ಸಂಶೋಧನ ಕೇಂದ್ರದ ಪರಿನಿಯಮಗಳಿಗೆ ಕಾರ್ಯಕಾರಿ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

5.11.19

೨೦೧.೧೫ ಕನ್ನಡ ವಿಶ್ವವಿದ್ಯಾಲಯದ ಅಧಿನಿಯಮದ ನಿಯಮ ೧೩ (೩)ನ್ನು ತಿದ್ದುಪಡಿಗೊಳಿಸಲು ಶಿಫಾರಸು ಮಾಡಿದ ಅಧಿನಿಯಮ ತಿದ್ದುಪಡಿ ಸಲಹಾ ಸಮಿತಿ ಸಭೆಯ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಸಭೆ ಅನುಮೋದನೆ ನೀಡುವ ಕುರಿತು.

ನಿರ್ಣಯ : ಕನ್ನಡ ವಿಶ್ವವಿದ್ಯಾಲಯದ ಅಧಿನಿಯಮದ ನಿಯಮ ೧೩ (೩)ನ್ನು ಮಾತ್ರ ತಿದ್ದುಪಡಿಗೊಳಿಸಲು ಶಿಫಾರಸು ಮಾಡಿದ ಅಧಿನಿಯಮ ತಿದ್ದುಪಡಿ ಸಲಹಾ ಸಮಿತಿ ಸಭೆಯ ನಡೆವಳಿಗಳಿಗೆ ಮತ್ತು ಅನುಷ್ಠಾನಗೊಳಿಸುವ ಮುಂದಿನ ಪ್ರಕ್ರಿಯೆಗಳಿಗೆ ಕಾರ್ಯಕಾರಿ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

೨೦೧.೧೬ (ಅ). ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ೨೦೧೫-೧೬ ಮತ್ತು ೨೦೧೬-೧೭ ನೇ ಸಾಲಿನಲ್ಲಿ ಕೈಗೊಂಡ ಕಾಮಗಾರಿಗಳ ಅವ್ಯವಹಾರಗಳ ತನಿಖಾ ಸಮಿತಿ ವರದಿ ಬಗ್ಗೆ ಮತ್ತು

(ಆ). ಡಾ.ಮಲ್ಲಿಕಾ.ಎಸ್.ಘಂಟಿ, ಕನ್ನಡ ವಿಶ್ವವಿದ್ಯಾಲಯದ ನಿವೃತ್ತ ಕುಲಪತಿಗಳು ಇವರ ಕಾಲಾವಧಿಯಲ್ಲಿ (ದಿ.೦೯.೦೯.೨೦೧೫ ರಿಂದ ೨೧.೦೨.೨೦೧೯ರವರೆಗೆ) ನಡೆದಿದೆ ಎನ್ನಲಾದ ಆರ್ಥಿಕ ಅಪರಾಧಿಕ ಕೃತ್ಯಗಳ ಬಗ್ಗೆ ದೂರಿನಲ್ಲಿರುವ ಆರೋಪಗಳ ಕುರಿತು ವರದಿ ಸಲ್ಲಿಸುವಂತೆ ಸರ್ಕಾರವು ದಿ. ೩೦.೦೪.೨೦೧೯ ಮತ್ತು ದಿ. ೧೦.೦೫.೨೦೧೯ರ ಪತ್ರಗಳಲ್ಲಿ (ಸಂಖ್ಯೆ ಇಡಿ ೨೮ ಕೆವಿವಿ ೨೦೧೬) ವಿಶ್ವವಿದ್ಯಾಲಯವನ್ನು ಕೋರಿರುವ ಕುರಿತು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಲು ಅನುಮೋದನೆ ಕೋರಿದೆ.

ನಿರ್ಣಯ : ಕನ್ನಡ ವಿಶ್ವವಿದ್ಯಾಲಯದಲ್ಲಿ ೨೦೧೫-೧೬ ಮತ್ತು ೨೦೧೬-೧೭ನೇ ಸಾಲಿನಲ್ಲಿ ಕೈಗೊಂಡ ಕಾಮಗಾರಿಗಳ ಅವ್ಯವಹಾರಗಳ ತನಿಖಾ ಸಮಿತಿಯು ಸರಕಾರಕ್ಕೆ ಸಲ್ಲಿಸಿದ್ದ ವರದಿ ಮೇರೆಗೆ ಮತ್ತು ಡಾ.ಮಲ್ಲಿಕಾ.ಎಸ್. ಘಂಟಿರವರು ಕನ್ನಡ ವಿಶ್ವವಿದ್ಯಾಲಯದ ಕುಲಪತಿಯವರಾಗಿದ್ದ ಕಾಲಾವಧಿಯಲ್ಲಿ ನಡೆದಿದೆ ಎನ್ನಲಾದ ಆರ್ಥಿಕ ಅಪರಾಧಿಕ ಕೃತ್ಯಗಳ ಕುರಿತು ಸರ್ಕಾರಕ್ಕೆ ಸಲ್ಲಿಕೆಯಾದ ದೂರಿನ ಮೇರೆಗೆ, ಸರ್ಕಾರ ತನ್ನ ಪತ್ರಗಳಲ್ಲಿ ನೀಡಿದ ನಿರ್ದೇಶನದಂತೆ, ವಿಶ್ವವಿದ್ಯಾಲಯವು ಸಂಬಂಧಪಟ್ಟ ಅಧಿಕಾರಿಗಳಿಂದ ವಿವರಣೆಗಳನ್ನು ಪಡೆದಿರುವುದನ್ನು ಮತ್ತು ತನಿಖಾ ಸಮಿತಿಯ ವರದಿಯಲ್ಲಿನ ಅಂಶಗಳನ್ನು ಸಂಬಂಧಿತ ಅಧಿಕಾರಿಗಳು ತಮ್ಮ ವಿವರಣೆಗಳಲ್ಲಿ ಅಲ್ಲಗಳೆದಿಲ್ಲದಿರುವುದನ್ನು ಅವಲೋಕಿಸಿದ ಸಭೆಯು ತನಿಖಾ ಸಮಿತಿಯ ವರದಿಯನ್ನು ಸರ್ವಾನುಮತದಿಂದ ಅಂಗೀಕರಿಸಿತು. ಸರ್ಕಾರದ ನಿರ್ದೇಶನದಂತೆ, ಸಂಬಂಧಪಟ್ಟವರಿಂದ ಪಡೆದ ವಿವರಣೆಗಳನ್ನು ಕನ್ನಡ ವಿಶ್ವವಿದ್ಯಾಲಯದ ಅಧಿನಿಯಮ 1991ರನ್ವಯ ಹಾಗೂ ಚಾಲ್ತಿಯಲ್ಲಿರುವ ಸರ್ಕಾರಿ ನಿಯಮಗಳನ್ವಯ ಪರಿಶೀಲಿಸಿ ಸರಕಾರಕ್ಕೆ ವರದಿಯನ್ನು ಸಲ್ಲಿಸಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

೨೦೧.೧೭ ಡಾ. ಕೆ. ಪ್ರೇಮಕುಮಾರ್ ಇವರನ್ನು ಕನ್ನಡ ವಿಶ್ವವಿದ್ಯಾಲಯದಲ್ಲಿ ಮರು ಸ್ಥಳ ನಿಯುಕ್ತಿಗೊಳಿಸುವ ಬಗೆಗೆ ಸರ್ಕಾರದ ಅಧೀನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಇವರು ವಿಶ್ವವಿದ್ಯಾಲಯಕ್ಕೆ ಬರೆದಿರುವ ಪತ್ರ (ಸಂಖ್ಯೆ ಇಡಿ ೧೮ ಯುಎನ್‌ಇ ೨೦೧೯ ದಿ.೦೮.೦೮.೨೦೧೯) ಕುರಿತು.

ನಿರ್ಣಯ : ಡಾ. ಕೆ. ಪ್ರೇಮಕುಮಾರ್ ಇವರನ್ನು ಕನ್ನಡ ವಿಶ್ವವಿದ್ಯಾಲಯದಲ್ಲಿ ಮರು ಸ್ಥಳ ನಿಯುಕ್ತಿಗೊಳಿಸುವ ಬಗೆಗೆ ದಿ.೧೯.೦೮.೨೦೧೯ರ ಪತ್ರದಲ್ಲಿ ವಿಶ್ವವಿದ್ಯಾಲಯವು ಸರಕಾರವನ್ನು ಕೋರಿದ ನಿರ್ದೇಶನದನ್ವಯ, ಉನ್ನತ ಶಿಕ್ಷಣ ಇಲಾಖೆಯು ಮುಂದಿನ ನಿರ್ದೇಶನಗಳನ್ನು ನೀಡಿದಲ್ಲಿ, ವಿಶ್ವವಿದ್ಯಾಲಯದ ಪರಿನಿಯಮದಲ್ಲಿನ ಅವಕಾಶಗಳನ್ನು ಅನುಲಕ್ಷಿಸಿ ಕ್ರಮವಹಿಸಲು ಸಭೆಯು ನಿರ್ಣಯಿಸಿತು.

೨೦೧.೧೮ ಶ್ರೀ ಆರ್.ವ್ಹಿ.ದೇಶಪಾಂಡೆ ಇವರನ್ನು ಕರ್ನಾಟಕ ಲಲಿತಕಲಾ ವಿಶ್ವವಿದ್ಯಾಲಯದ ವಿಶೇಷಾಧಿಕಾರಿಗಳ ಆಪ್ತ ಸಹಾಯಕರನ್ನಾಗಿ ನಿಯೋಜಿಸುವ ಬಗೆಗೆ ಸರ್ಕಾರದ ಅಧೀನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಇವರು ವಿಶ್ವವಿದ್ಯಾಲಯಕ್ಕೆ ಬರೆದಿರುವ ಪತ್ರ (ಸಂಖ್ಯೆ ಇಡಿ ೪೯ ಯುಆರ್‌ಸಿ ೨೦೧೯(ಇ) ದಿ.೦೮.೦೮.೨೦೧೯) ಕುರಿತು.

ನಿರ್ಣಯ : ಸಿಬ್ಬಂದಿಯು ಅನಾರೋಗ್ಯ ರಜೆಯಲ್ಲಿರುವುದನ್ನು ವಿಶ್ವವಿದ್ಯಾಲಯವು ದಿ.೧೬.೦೯.೨೦೧೯ರಂದು ಸರಕಾರಕ್ಕೆ ಪತ್ರ ಬರೆದಿದೆ. ಸಿಬ್ಬಂದಿಯು ರಜೆಯಿಂದ ಕರ್ತವ್ಯಕ್ಕೆ ಹಿಂದಿರುಗಿದ ನಂತರ ವಿಶ್ವವಿದ್ಯಾಲಯದ ಅಗತ್ಯತೆಗಳನ್ನು ಅನುಲಕ್ಷಿಸಿ ನಿಯಮಾನುಸಾರ ಕ್ರಮವಹಿಸಲು ಸಭೆಯು ನಿರ್ಣಯಿಸಿತು.

5/11/19

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು**

೨೦೧.೧೯ ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರಾಕೃತ ಮತ್ತು ಪಾಲಿ ಅಧ್ಯಯನ ಕೇಂದ್ರ ಸ್ಥಾಪಿಸುವ ಬಗೆಗೆ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತ ಇಲಾಖೆ ಇವರು ವಿಶ್ವವಿದ್ಯಾಲಯಕ್ಕೆ ಬರೆದಿರುವ ಪತ್ರ (ಸಂಖ್ಯೆ ಡಿಕೆಸಿ/೨೦೧೭/೩೯/ ೨೦೧೯ ದಿ.೦೬.೦೯.೨೦೧೯) ಕುರಿತು.

ನಿರ್ಣಯ : ಸರಕಾರಕ್ಕೆ ಅಗತ್ಯ ಪ್ರಸ್ತಾವನೆ ಸಲ್ಲಿಸಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

೨೦೧.೨೦ ಯೋಗ ಅಧ್ಯಯನ ಕೇಂದ್ರಕ್ಕೆ ತಾತ್ಕಾಲಿಕ ಅತಿಥಿ ಅಧ್ಯಾಪಕರನ್ನು ನೇಮಿಸಿಕೊಳ್ಳಲು ಹಾಗೂ ಗಂಟೆಗಳ ಲೆಕ್ಕದಲ್ಲಿ ಒಂದು ಗಂಟೆಗೆ ರೂ. ೩೭೫.೦೦ನಂತೆ ಒಟ್ಟು ೧೬ (ಒಂದು ತಿಂಗಳಿಗೆ) ಗಂಟೆಗಳಿಗೆ ಮಾಸಿಕ ರೂ. ೬೦೦೦.೦೦ಗಳ ಗೌರವ ಸಂಭಾವನೆ ನಿಗದಿಗೊಳಿಸಲು ಕಾರ್ಯಕಾರಿ ಸಮಿತಿ ಸಭೆಯ ಅನುಮೋದನೆ ಕುರಿತು.

ನಿರ್ಣಯ : ಅಗತ್ಯ ಸಂಖ್ಯೆಯ ತಾತ್ಕಾಲಿಕ ಅತಿಥಿ ಅಧ್ಯಾಪಕರನ್ನು ನೇಮಕಾತಿ ಮಾಡಿಕೊಳ್ಳಲು, ಮಾಸಿಕ ತಲಾ ರೂ. ೬೦೦೦.೦೦ (ಆರು ಸಾವಿರ ರೂಪಾಯಿ) ಗೌರವ ಸಂಭಾವನೆ ನೀಡಲು ಸಭೆಯು ಅನುಮೋದನೆ ನೀಡಿತು.

೨೦೧.೨೧ ದಿನಾಂಕ ೨೦.೦೯.೨೦೧೯ ರಂದು ನಡೆದ ದೂರಶಿಕ್ಷಣ ನಿರ್ದೇಶನಾಲಯದ ೧೬ನೇ ಉನ್ನತ ಸಲಹಾ ಸಮಿತಿ ಸಭೆಯ ನಡವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕುರಿತು.

ನಿರ್ಣಯ : ದಿನಾಂಕ ೨೦.೦೯.೨೦೧೯ ರಂದು ನಡೆದ ದೂರಶಿಕ್ಷಣ ನಿರ್ದೇಶನಾಲಯದ ೧೬ನೇ ಉನ್ನತ ಸಲಹಾ ಸಮಿತಿ ಸಭೆಯ ನಡವಳಿಗಳಿಗೆ ಕಾರ್ಯಕಾರಿ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

೨೦೧.೨೨ ದಿನಾಂಕ ೨೭.೦೮.೨೦೧೯ ರಂದು ನಡೆದ ಅಭೇರಾಜ ಬಲ್ಡೋಟ ಜೈನ ಸಂಸ್ಕೃತಿ ಅಧ್ಯಯನ ಪೀಠದ ಸಲಹಾ ಸಮಿತಿ ಸಭೆಯ ನಡವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ದಿನಾಂಕ ೨೭.೦೮.೨೦೧೯ ರಂದು ನಡೆದ ಅಭೇರಾಜ ಬಲ್ಡೋಟ ಜೈನ ಸಂಸ್ಕೃತಿ ಅಧ್ಯಯನ ಪೀಠದ ಸಲಹಾ ಸಮಿತಿ ಸಭೆಯ ನಡವಳಿಗಳಿಗೆ ಕಾರ್ಯಕಾರಿ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

೨೦೧.೨೩ ಡಾ. ಮಲ್ಲಿಕಾ.ಎಸ್.ಘಂಟಿರವರು ಕನ್ನಡ ವಿಶ್ವವಿದ್ಯಾಲಯದ ಕುಲಪತಿಯಾಗಿದ್ದ ಅವಧಿಯಲ್ಲಿ ಕೋಟ್ಯಾಂತರ ರೂ.ಗಳ ಹಣ ದುರುಪಯೋಗ ಎಂದು ಅಣ್ಣಾ ಫೌಂಡೇಶನ್‌ನ ಶ್ರೀ ರಾಜಶೇಖರ ಮುಲಾಲಿರವರು ಸಲ್ಲಿಸಿದ ಸಾರ್ವಜನಿಕ ಹಿತಾಸಕ್ತಿ ದೂರಿನ ಬಗೆಗೆ ಉನ್ನತ ಶಿಕ್ಷಣ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ವಿಶ್ವವಿದ್ಯಾಲಯಕ್ಕೆ ಬರೆದಿರುವ ಪತ್ರದ (ಇಡಿ ೧೧ ಕೆವಿವಿ ೨೦೧೯ ದಿ.೧೭.೦೯.೨೦೧೯) ಕುರಿತು.

ನಿರ್ಣಯ : (೧) ಡಾ. ಮಲ್ಲಿಕಾ.ಎಸ್.ಘಂಟಿಯವರ ಮನವಿ ಮೇರೆಗೆ ಸರ್ಕಾರ ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿದಂತೆ, ಅವರು ಕುಲಪತಿಯಾಗಿದ್ದ ಕಾಲಾವಧಿಯಲ್ಲಿ ಕೋಟ್ಯಾಂತರ ರೂ.ಗಳ ದುರುಪಯೋಗದ ಆರೋಪಗಳ ಸತ್ಯಾಸತ್ಯತೆ ಕುರಿತು ರಾಜ್ಯ ಲೆಕ್ಕ ಪತ್ರ ಇಲಾಖೆಯಿಂದ ಪೂರ್ಣಪ್ರಮಾಣದ ತನಿಖೆ ನಡೆಸಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆಯು ನಿರ್ಣಯಿಸಿತು. ದಿ.೧೯.೦೯.೨೦೧೫ ರಿಂದ ೨೧.೦೨.೨೦೧೯ ವರೆಗಿನ ಕಾಲಾವಧಿಯಲ್ಲಿನ ಕಾಮಗಾರಿ, ಆರ್ಥಿಕ ನಿರ್ವಹಣೆಗಳ ಪೂರ್ಣಪ್ರಮಾಣದ ತನಿಖೆಯನ್ನು ನಡೆಸಿ ವರದಿ ಸಲ್ಲಿಸುವಂತೆ ವಿಶ್ವವಿದ್ಯಾಲಯವು ರಾಜ್ಯ ಲೆಕ್ಕಪತ್ರ ಇಲಾಖೆಯನ್ನು ಕೋರಲು ಸಭೆಯು ನಿರ್ಣಯಿಸಿತು.

(೨) ಇದೇ ವಿಷಯದಲ್ಲಿ, ಪಾರದರ್ಶಕ ತನಿಖೆಗಾಗಿ ಸದರಿ ಕಾಲಾವಧಿಯಲ್ಲಿ ಆಡಳಿತ, ಕಾಮಗಾರಿ, ಖರೀದಿ, ಆರ್ಥಿಕ ಪ್ರಕ್ರಿಯೆಯ ಕರ್ತವ್ಯಗಳಲ್ಲಿದ್ದ ಸಿಬ್ಬಂದಿಗಳನ್ನು ಪ್ರಸ್ತುತ ಕರ್ತವ್ಯಗಳಿಂದ ದೂರವಿರಿಸುವ ಕ್ರಮವಹಿಸಲು ಸಭೆಯು ನಿರ್ಣಯಿಸಿತು. ಪಾರದರ್ಶಕವಾದ ತನಿಖೆಗೆ ಆಂತರಿಕ ತಜ್ಞರ ಸಮಿತಿಯನ್ನು ರಚಿಸಿ, ಸಮಿತಿ ವರದಿಯ ಪ್ರತಿಯನ್ನು ಒದಗಿಸಲು ಡಾ. ಮಲ್ಲಿಕಾ.ಎಸ್.ಘಂಟಿರವರು ದಿ.೦೬.೦೫.೨೦೧೯ರ ಪತ್ರದಲ್ಲಿ ಕೋರಿದ್ದರನ್ವಯ, ಸಂಬಂಧಪಟ್ಟವರಿಂದ ವಿಶ್ವವಿದ್ಯಾಲಯವು ವಿವರಣೆಗಳನ್ನು ಪಡೆದು, ಸಿದ್ಧಪಡಿಸಿದ ಅನುಪಾಲನಾ ವರದಿಯನ್ನು ಇದೇ ಸಭೆಯಲ್ಲಿ ಮಂಡಿಸಲಾಗಿದೆ.

(೩) ಮತ್ತೊಂದೆಡೆ, ಸರಕಾರ ನೇಮಿಸಿದ್ದ ತನಿಖಾ ಸಮಿತಿಯು ಸಲ್ಲಿಸಿದ ವರದಿಯ ಮೇಲೆ ಸರ್ಕಾರದ ಪತ್ರದಲ್ಲಿನ ನಿರ್ದೇಶನದಂತೆ, ವಿಶ್ವವಿದ್ಯಾಲಯವು ಸಂಬಂಧಪಟ್ಟವರಿಂದ ವಿವರಣೆಗಳನ್ನು ಪಡೆದು, ಸರ್ಕಾರಕ್ಕೆ ಸಲ್ಲಿಸುವ ವರದಿಯನ್ನು ಸಿದ್ಧಪಡಿಸಿದೆ.

5.11.19

ಮೇಲ್ಕಾಣಿಸಿದ (೨) ಮತ್ತು (೩)ರ ವರದಿಗಳನ್ನು ರಾಜ್ಯ ಲೆಕ್ಕಪತ್ರ ಇಲಾಖೆಯ ಮುಂದಿನ ತನಿಖೆಗೆ ವಿಶ್ವವಿದ್ಯಾಲಯವು ಒಪ್ಪಿಸಲು ಸಭೆಯು ನಿರ್ಣಯಿಸಿತು.

೨೦೧.೨೪ ಡಾ. ಮಲ್ಲಿಕಾ.ಎಸ್.ಘಂಟಿಯವರು ಕುಲಪತಿಗಳಾಗಿದ್ದ ಅವಧಿಯಲ್ಲಿ ನಡೆದಿದೆ ಎನ್ನಲಾದ ವಿವಿಧ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಆ ಅವಧಿಯಲ್ಲಿ ಅಧಿಕಾರ ನಿರ್ವಹಿಸಿದ್ದ ವಿಶ್ವವಿದ್ಯಾಲಯದ ಸಿಬ್ಬಂದಿಗಳಿಗೆ ವಿವರಣೆ ನೀಡುವಂತೆ ಕೇಳಿ ವಿಶ್ವವಿದ್ಯಾಲಯವು ಬರೆದ ಪತ್ರಗಳ ಬಗೆಗೆ ಸಂಬಂಧಪಟ್ಟವರು ಕಾರ್ಯಕಾರಿ ಸಮಿತಿಗೆ ಸಲ್ಲಿಸಿರುವ ಮನವಿ ಕುರಿತು.

ನಿರ್ಣಯ : ವಿಶ್ವವಿದ್ಯಾಲಯವು ಸಂಬಂಧಪಟ್ಟವರಿಗೆ ಕೇಳಿದ್ದ ವಿವರಣೆಗಳು ಸರ್ಕಾರದ ಪತ್ರದಲ್ಲಿನ ದೂರಿನ ವಿಷಯಗಳಿಗೆ ಅನುಗುಣವಾಗಿರುವುದು ಕಾರ್ಯಕಾರಿ ಸಮಿತಿಗೆ ಮನವರಿಕೆಯಾಗಿದೆ ಎಂಬ ಹಿಂಬರಹವನ್ನು ಮನವಿದಾರರಿಗೆ ನೀಡಲು ಸಭೆಯು ನಿರ್ಣಯಿಸಿತು.

೨೦೧.೨೫ ಕನ್ನಡ ವಿಶ್ವವಿದ್ಯಾಲಯದ ಪತ್ರದಲ್ಲಿ ಎಚ್ಚರಿಕೆ ಎಂಬ ಪದಬಳಕೆ ಮಾಡಿದ್ದ ಬಗೆಗೆ ದಿ. ೩೦.೦೯.೨೦೧೯ರಂದು ಪ್ರಾಧ್ಯಾಪಕರಾದ ಡಾ. ಡಿ.ಪಾಂಡುರಂಗಬಾಬು ಅವರು ಕಾರ್ಯಕಾರಿ ಸಮಿತಿಗೆ ಸಲ್ಲಿಸಿರುವ ಮನವಿ ಕುರಿತು.

ನಿರ್ಣಯ : ಸಿಬ್ಬಂದಿಯ ಸೇವಾ ವಿಷಯಕ್ಕೆ ಸಂಬಂಧಿಸಿದ ಮತ್ತು ವಿಶ್ವವಿದ್ಯಾಲಯದ ಅಂತರಿಕ ವಿಚಾರವಾಗಿರುವುದರಿಂದ ಪರಸ್ಪರ ಚರ್ಚಿಸಿ ನಿರ್ಣಯಕೈಗೊಳ್ಳಬಹುದು ಅಥವಾ ವಿಶ್ವವಿದ್ಯಾಲಯದ ಆಡಳಿತ ಇಲಾಖೆಯಾದ ಉನ್ನತ ಶಿಕ್ಷಣ ಇಲಾಖೆಯ ಸಲಹೆ ಪಡೆಯಲು ಸಭೆಯಲ್ಲಿ ಉಪಸ್ಥಿತರಿದ್ದ ಹಣಕಾಸು ಇಲಾಖೆಯ ಜಂಟಿ ಕಾರ್ಯದರ್ಶಿಯವರು ಸೂಚಿಸಿದರು. ಈ ಹಿನ್ನೆಲೆಯಲ್ಲಿ, ಡಾ. ಡಿ.ಪಾಂಡುರಂಗಬಾಬು ಅವರು ಮಾನ್ಯ ಕುಲಪತಿಯವರಿಗೆ ಬರೆದ ಪತ್ರದಲ್ಲಿ ಪ್ರಶ್ನಾರ್ಥಕ ಚಿಹ್ನೆಗಳ ಮೂಲಕ ಪ್ರಶ್ನಿಸಿ, ಆಡಳಿತದ ಕ್ರಮದ ಬಗೆಗೆ ಆಕ್ಷೇಪಣೆ ವ್ಯಕ್ತಪಡಿಸಿದ್ದ ಒಕ್ಕಣೆಯ ಸಂಬಂಧದಲ್ಲಿ ಮಾತ್ರ ವಿಶ್ವವಿದ್ಯಾಲಯವು ಅವರಿಗೆ ನೀಡಿದ್ದ ಪತ್ರದಲ್ಲಿನ ಎಚ್ಚರಿಕೆ ಎಂಬ ಪದಬಳಕೆಯನ್ನು ಪ್ರಸ್ತುತ ಪ್ರಕರಣದಲ್ಲಿ ವಿಶ್ವವಿದ್ಯಾಲಯವು ಶಿಕ್ಷೆಯೆಂದು ಪರಿಗಣಿಸಿಲ್ಲವೆಂಬುದನ್ನು ಸಭೆಗೆ ಮನವರಿಕೆ ಮಾಡಿಕೊಡಲಾಯಿತು.

೨೦೧.೨೬ ವಿಶ್ವವಿದ್ಯಾಲಯದ ನಾಲ್ಕು ನಿಕಾಯಗಳ ಅಡಿಯಲ್ಲಿ ಬರುವ ವಿವಿಧ ವಿಭಾಗಗಳ ಬೋಧಕ ಹುದ್ದೆಗಳ ಸೃಜನೆ ಕುರಿತು ದಿ. ೨೪.೦೯.೨೦೧೯, ೨೬.೦೯.೨೦೧೯ ಹಾಗೂ ೨೭.೦೯.೨೦೧೯ ರಂದು ನಡೆದ ಸಭೆಯ ನಡವಳಿಗಳಿಗೆ ಕಾರ್ಯಕಾರಿ ಸಮಿತಿ ಸಭೆ ಅನುಮೋದನೆ ಕೋರಿದೆ.

ನಿರ್ಣಯ : ವಿಶ್ವವಿದ್ಯಾಲಯದ ನಾಲ್ಕು ನಿಕಾಯಗಳ ಅಡಿಯಲ್ಲಿ ಬರುವ ವಿವಿಧ ವಿಭಾಗಗಳ ಬೋಧಕ ಹುದ್ದೆಗಳ ಸೃಜನೆ ಕುರಿತು ನಡೆದ ಸಭೆಯ ನಡವಳಿಗಳಿಗೆ ಮತ್ತು ಸರಕಾರದ ಅನುಮೋದನೆ ಕೋರುವ ಸಂಬಂಧದ ಮುಂದಿನ ಪ್ರಕ್ರಿಯೆಗಳಿಗೆ ಕಾರ್ಯಕಾರಿ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

೨೦೧.೨೭ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದಲ್ಲಿ ಧರಣಿ ಕೈಗೊಂಡು ಮಾಸಿಕ ಆರ್ಥಿಕ ನೆರವು ಕಳೆದ ಎರಡು ವರ್ಷಗಳಿಂದ ಬಾಕಿಯಿದೆ ಎಂದು ಸಲ್ಲಿಸಿದ್ದ ಮನವಿ ಕುರಿತು.

ನಿರ್ಣಯ : ಸರಕಾರದ ಹಣಕಾಸು ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ಪರವಾಗಿ ಉಪಸ್ಥಿತರಿದ್ದ ಜಂಟಿ ಕಾರ್ಯದರ್ಶಿಯವರು ಅವರು ಮಾತನಾಡಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯವು ಮಾಸಿಕ ಆರ್ಥಿಕ ನೆರವು ವಿತರಿಸುವ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರದ ಯಾವುದೇ ಬಾಧ್ಯಸ್ಥಿಕೆ ಇಲ್ಲವೆಂದು ಕಾರ್ಯಕಾರಿ ಸಮಿತಿ ಸಭೆಗೆ ಸ್ಪಷ್ಟಪಡಿಸಿದರು. ವಿಶ್ವವಿದ್ಯಾಲಯವು ಸರ್ಕಾರಕ್ಕೆ ಸಲ್ಲಿಸಿದ ಕ್ರಿಯಾಯೋಜನೆಗೆ ಸೀಮಿತವಾಗಿ ಅನುದಾನವನ್ನು ಬಳಕೆ ಮಾಡಿಕೊಂಡು, ಕಾಲಕಾಲಕ್ಕೆ ಬಳಕೆ ಪ್ರಮಾಣಪತ್ರವನ್ನು ಸರ್ಕಾರಕ್ಕೆ ಸಲ್ಲಿಸಬೇಕೆಂದು ಸಭೆಗೆ ಸಲಹೆ ನೀಡಿದರು.

ಕುಲಸಚಿವರ ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

5.11.19

ಕುಲಸಚಿವರು
ಪದನಿಮಿತ್ತ ಕಾರ್ಯದರ್ಶಿ

ಕುಲಪತಿಗಳು
ಅಧ್ಯಕ್ಷರು